ಜೋಶ್‌ಗೆ ತಂದೆಯ ಸಮಾನರಾಗುವವರು ಯಾರೂ ಇರಲಿಲ್ಲ. ಜೋಶ್ ತನ್ನ ಯಾವ ಮಲತಂದೆಯನ್ನೂ 'ಡ್ಯಾಡ್' ಎಂದು ಕರೆಯಲಿಲ್ಲ. ಆದರೆ ತಾಯಿಯನ್ನೂ 'ಅಮ್ಮಾ' ಎಂದು ಕರೆಯದಿರಲು ಸಾಧ್ಯವೇ, ಪಾಲ್? ನಾನು ಮಾರ್ಕೋನಲ್ಲಿ ಯಾವುದನ್ನೂ ಮುಚ್ಚುಮರೆ ಮಾಡಿರಲಿಲ್ಲ. ಅವನು ನನ್ನ ಬಳಿ ಪ್ರೀತಿಯನ್ನು ಯಾಚಿಸಿದಾಗ ಅವನಿಗೆ, ನಾನು ಹದಿನೆಂಟರ ಮಗನಿರುವ ತಾಯಿ ಎಂದು ಸ್ಪಷ್ಟಪಡಿಸಿದ್ದೆ.

ಅವನು ಒಮ್ಮೆ ಅವನನ್ನು ಇಷ್ಟಪಟ್ಟರೆ, ಒಮ್ಮೆ ಅವನ ಬಗ್ಗೆ ರೇಗುತ್ತಿದ್ದ. ಪ್ರವಾಸದಲ್ಲಿ ಜೋಶ್ ನೀಲ್‌ನನ್ನು ಎತ್ತಿಕೊಂಡಿದ್ದರೆ, ಕೂಡಲೇ ಚಹಾ–ಕಾಫಿ ಅಥವಾ ಸ್ನ್ಯಾಕ್ಸ್ ಖರೀದಿಸಿ ಕೊಡುತ್ತಿದ್ದ, ಮನೆಯ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದ ಅಥವಾ ಮಾರ್ಕೋನೊಂದಿಗೆ ಹೆಚ್ಚು ಶಕ್ತಿಯುಳ್ಳ ಆಟವನ್ನು ಆಡುತ್ತಿದ್ದ, ಅವನನ್ನು ತುಂಬಾ ಪ್ರಶಂಸಿಸುತ್ತಿದ್ದ, 'ಓಹ್, ಜೋಶ್... ಯೂ ಆರ್ ಸಚ್ ಎ ಬಿಗ್ ಹೆಲ್ಪ್... ನಿನ್ನ ಮುಂದಿನ ರಜ ಯಾವಾಗ? ಆಗ ಇಲ್ಲಿಗೇ ಬಂದು ಬಿಡು... ನನಗೆ ನಿನ್ನ ಸೀವಿ (ಕರಿಕ್ಯುಲಮ್ ವೀಟೆ) ಕೊಡು, ಅದನ್ನು ನನ್ನ ಗೆಳೆಯರಿಗೆ ಫಾರ್ವರ್ಡ್ ಮಾಡ್ತೀನಿ.'

ಒಮ್ಮೆ ಜೋಶ್ ಸಿಯಾಟಲ್‌ನ ನಮ್ಮ ಮನೆಗೆ ಬಂದಿದ್ದ. ಆ ದಿನಗಳಲ್ಲಿ ಕಿಚನ್ನಿನ ಸಿಂಕ್ ಮತ್ತು ಒಂದು ಟಾಯ್ಲೆಟ್‌ನ ಟ್ಯಾಂಕ್ ಫ್ಲಶ್‌ಗಳು ಸ್ವಲ್ಪ ಹಾಳಾಗಿದ್ದವು. ನಾವು ಪ್ಲಂಬರ್‌ನನ್ನು ಕರೆಯಲು ಯೋಚಿಸುತ್ತಿದ್ದೆವು, ಆದರೆ ಅದು ಏಕೋ ಮುಂದಕ್ಕೆ ಹೋಗುತ್ತಿತ್ತು. ಜೋಶ್‌ಗೆ ಪ್ಲಬಿಂಗ್ ಮತ್ತು ಹೋಮ್ ರಿಪೇರಿ ಕೆಲಸಗಳು ಬರುತ್ತಿದ್ದವು. ಅವನೇ ಹೋಗಿ ಪೇಟೆಯಿಂದ ನಲ್ಲಿ ಕೆಲಸಕ್ಕೆ ಸಂಬಂಧಿಸಿದ ಉಪಕರಣಗಳನ್ನು ಖರೀದಿಸಿ ತಂದ. ನಂತರ ಸಿಂಕ್ ರಿಪೇರಿ ಮಾಡಿದ. ಟಾಯ್ಲೆಟ್‌ನ ಟ್ಯಾಂಕ್ ವಾಲ್ವ್ ಬದಲಿಸಿ ಫ್ಲಶ್ ರಿಪೇರಿ ಮಾಡಿದ.

ಮಾರ್ಕೋ ಸಂಜೆ ಕಚೇರಿಯಿಂದ ಮನೆಗೆ ಬಂದಾಗ, ನಾನು ಅವನಿಗೆ, ಜೋಶ್ ಸಿಂಕ್ ಮತ್ತು ಫ್ಲಶ್ ಸರಿ ಮಾಡಿದ್ದಾನೆ, ಈಗ ಪ್ಲಂಬರನ ಅಗತ್ಯವೇ ಇಲ್ಲ ಎಂದೆ. ಮಾರ್ಕೋ ಕಿಚನ್ನಿನ ಸಿಂಕ್‌ಗೆ ನೀರು ಹಾಕಿ ನೋಡಿದ, ನೀರು ಸರ್ರನೆ ಹರಿದು ಹೋಗುತ್ತಿತ್ತು, ನಿಲ್ಲುತ್ತಿರಲಿಲ್ಲ. ನಂತರ ಟಾಯ್ಲೆಟ್‌ನ ಫ್ಲಶ್ ಪರೀಕ್ಷಿಸಿದ. ಅದೂ ಸರಿಯಾಗಿತ್ತು. ಮಾರ್ಕೋ, 'ಅರೇ ವಾಹ್...' ಎಂದ. ಅವನ ಧ್ವನಿಯಲ್ಲಿ ಸಂತಸವಿತ್ತು. ಅವನು ಜೋಶ್‌ನ ಬೆನ್ನು ತಟ್ಟುತ್ತಾ ಹೇಳಿದ, 'ನೀನು ನಮ್ಮ ಮನೆಗೆ ಅತಿಥಿಯಾಗಿದ್ದೀಯ, ನೀನು ಪದೇಪದೇ ನಮ್ಮ ಮನೆಗೆ ಬರುವುದನ್ನು ನಾನು ಇಷ್ಟಪಡುತ್ತೇನೆ.'

ಮಾರ್ಕೋ ಈ ಮಾತನ್ನು ಜೋಶ್‌ನನ್ನು ಹೊಗಳಲು ಹೇಳಿದ್ದ, ಆದರೆ ಜೋಶ್‌ನ ಮುಖ ಕಳೆಗುಂದಿತು. ಅವನು ಮಾರ್ಕೋಗೆ ಏನೂ ಹೇಳದೆ ನಿರಾಸೆಯಿಂದ ನನ್ನನ್ನು ಕೇಳಿದ, 'ನಾನು ಇಲ್ಲಿ ಅತಿಥಿಯೇ? ನಿಮ್ಮ ಮಗನಲ್ಲವೇ?'

'ನೀನು ನನ್ನ ಚಿನ್ನದಂಥ ಮಗ...' ನಾನು ಅವನನ್ನು ಅಪ್ಪಿಕೊಂಡು ಹೇಳಿದೆ, 'ನನಗೆ ನಿನ್ನ ಬಗ್ಗೆ ತುಂಬಾ ಹೆಮ್ಮೆಯಿದೆ.'

ನೀವು ಜೋಶ್‌ಗೆ ಚುಚ್ಚುವಂಥ ಮಾತನ್ನೇಕೆ ಹೇಳ್ತೀರ ಎಂದು ನಾನು ಮಾರ್ಕೋನನ್ನು ಗದರಿದೆ.

'ನಾನು ಅಂಥದ್ದೇನು ಹೇಳಿದೆ...?' ಅವನು ಮರು ಪ್ರಶ್ನಿಸಿದ.

ನಾನು ನಿರಾಸೆಯಿಂದ ತಲೆಯಾಡಿಸಿದೆ, ಮಗನ ಬಗ್ಗೆ ನನಗೆ ಕರುಣೆ ಬಂತು. ಪ್ರತಿಯೊಬ್ಬರೂ ಅವನೊಂದಿಗೆ ತಪ್ಪಾಗಿ ವರ್ತಿಸುತ್ತಿದ್ದಾರೆ ಎಂದು ಅನ್ನಿಸಿತು.

ಬೆಳಿಗ್ಗೆಯ ಘಟನೆ...! ಅಯ್ಯೋ ದೇವರೇ!

'ನಾನು ಅಂದು ಬೆಳಿಗ್ಗೆ ಸೂಪರ್ ಮಾರ್ಕೆಟ್‌ನಿಂದ ಸಾಮಾನುಗಳನ್ನು ಖರೀದಿಸಿ ಮನೆಗೆ ಬರುತ್ತಿದ್ದೆ, ಆಗ ಕೆಳಗಿನ ಫ್ಲೋರ್‌ನಲ್ಲಿರುವ ಕೋಲೀನ್ ಬ್ರುಕ್ ಸಹ ಹೊರಗಿನಿಂದ ಮನೆಗೆ ಬರುತ್ತಿದ್ದರು. ನೀವು ನನಗೆ ಮನೆಯ ಬೀಗದ ಕೈಯನ್ನು ಕೊಡಲು ಮರೆತಿದ್ದಿರಿ. ಕೋಲೀನ್ ಬ್ರುಕ್ ಬಿಲ್ಡಿಂಗ್‌ನ ಬಾಗಿಲನ್ನು ತನ್ನ ಬೀಗದ ಕೈಯಿಂದ ತೆಗೆಯುವಾಗ, ನಾನೂ ಸಹ ಅವರೊಂದಿಗೆ ಬಿಲ್ಡಿಂಗ್‌ನೊಳಗೆ ಬರಲು ಮುಂದಾದೆ, ಆದರೆ ಅವರು ನನ್ನನ್ನು ಒಳಗೆ ಬರಲು ಬಿಡದೆ, ನಿನ್ನನ್ನು ನಾನು ಇಲ್ಲಿ ಎಂದೂ ನೋಡಿಲ್ಲ, ನೀನ್ಯಾರೆಂದು ನನಗೆ ಗೊತ್ತಿಲ್ಲ ಎಂದರು. ಆಗ ನಾನು, ನನ್ನ ಮದರ್ ನ್ಯಾನ್ಸಿ ಲೆರಾಯ್ ಇಲ್ಲಿ ವಾಸಿಸುತ್ತಾರೆ, ನಾನು ಅವರ ಮನೆಯಲ್ಲಿರಲು ಬಂದಿದ್ದೇನೆ ಎಂದೆ.

'ಆಗ ಕೋಲೀನ್ ಬ್ರುಕ್, ನನಗೇನೂ ಗೊತ್ತಿಲ್ಲ. ನಾನು ನಿನ್ನನ್ನು ಬಿಲ್ಡಿಂಗಿನೊಳಗೆ ಬರಲು ಬಿಡಲ್ಲ. ಇಲ್ಲಿ ಕೆಲವು ಕಳ್ಳತನಗಳಾಗಿವೆ, ಹೀಗಾಗಿ ಜನ ಎಚ್ಚೆತ್ತುಗೊಂಡಿದ್ದಾರೆ, ನೀನು ಹೋಗುವ ಮನೆಯ ಕಾಲಿಂಗ್ ಬೆಲ್ ಒತ್ತು ಎಂದಳು' ಎಂದು ಜೋಶ್ ನನಗೆ ಹೇಳಿದ.

ನಂತರ ಜೋಶ್ ಶಾಪಿಂಗ್ ಬ್ಯಾಗನ್ನು ಮೇಜಿನ ಮೇಲಿಟ್ಟು ನನ್ನನ್ನು ಕೇಳಿದ, 'ಇಲ್ಲಿ ಕಳ್ಳತನವಾಗಿದೆಯೇ?'

'ನನ್ನೆದುರಿಗೆ ಒಂದು ಕಳ್ಳತನವಾಗಿದೆ, ಕೆಳಗಿನ ಬೇಸ್‌ಮೆಂಟ್‌ನಲ್ಲಿರುವ ಯಂಗ್ ಇಂಡಿಯನ್ ಕಪಲ್ ಮನೆಯಲ್ಲಿ...' ಎಂದೆ ನಾನು.

ಒಂದು ಸಂಜೆ ಆರು ಗಂಟೆಗೆ ಅಭಿಲಾಷ್ ಕಚೇರಿಯಿಂದ ಮನೆಗೆ ಬಂದಾಗ, ಮನೆಯ ಬೀಗ ಮುರಿದಿದ್ದನ್ನು ನೋಡಿದ. ಅವನಿಗೆ ಗಾಬರಿಯಾಯಿತು, ಒಳಗೆ ಹೋಗಿ ನೋಡಿದಾಗ ಅವನ ಪ್ರಜ್ಞೆಯೇ ಹಾರಿಹೋಯಿತು. ಎದುರಿಗಿದ್ದ ಕ್ಯಾಬಿನೆಟ್‌ನಲ್ಲಿ ಟಿ.ವಿ. ಇರಲಿಲ್ಲ, ಬೆಡ್‌ರೂಮಿನಲ್ಲಿ ಎಲ್ಲವೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಲ್ಲಿರುವುದೆಲ್ಲವೂ ಖಾಲಿಯಾಗಿದ್ದವು. ತನ್ನ ಮನೆಯ ಪರಿಸ್ಥಿತಿಯನ್ನು ನೋಡಿ ಅವನು ರೋದಿಸಿದ. ತಕ್ಷಣ ತನ್ನ ಹೆಂಡತಿಯ ಕಚೇರಿಗೆ ಫೋನ್ ಮಾಡಿ, ನಮ್ಮ ಮನೆಯಲ್ಲಿ ಕಳ್ಳತನವಾಗಿದೆ ಎಂದ.

ಶೋಭನಾ ಸಹ ಗಾಬರಿಯಿಂದ ಮನೆಗೆ ಬಂದಳು. ಅವರು ಮನೆಯನ್ನು ಶೋಧಿಸಿದಾಗ, ವಿವಾಹದ ಸಂದರ್ಭದಲ್ಲಿನ ಎಲ್ಲಾ ಒಡವೆಗಳೂ ಕಳ್ಳತನವಾಗಿದ್ದು, ಅದರೊಂದಿಗೆ ಎಲೆಕ್ಟ್ರಾನಿಕ್ ವಸ್ತುಗಳೆಲ್ಲೂ ಮಾಯವಾಗಿದ್ದವು. ವಿವಾಹದ ಸಂದರ್ಭದಲ್ಲಿ ಅವರಿಗೆ ಕೊಡಲಾದ ಕೆಲವು ಉಡುಗೊರೆಗಳು ಸಹ ಕಳ್ಳತನವಾಗಿದ್ದವು; ಆ ಉಡುಗೊರೆಯ ಪ್ಯಾಕೇಟನ್ನು ಅವರಿನ್ನೂ ತೆರೆದೂ ನೋಡಿರಲಿಲ್ಲ. ಹಾಡಹಗಲೇ ಮನೆ ಬರಿದಾಗಿದ್ದು, ಯಾರಿಗೂ ತಿಳಿಯಲೇ ಇಲ್ಲ. ನಮಗೆಲ್ಲಾ ಆಶ್ಚರ್ಯವಾಗಿತ್ತು, ನಾಚಿಕೆಯೂ ಆಗಿತ್ತು. ಪೊಲೀಸರು ಬಂದರು, ಅವರ ಮನೆಯ ಮಾಲೀಕನೂ ಬಂದ, ಬಿಲ್ಡಿಂಗ್‌ನ ಜನರೆಲ್ಲರೂ ಕಲೆತರು. ಕೋಲೀನ್ ಪದೇಪದೇ, 'ಸಂಜೆ ಸುಮಾರು ನಾಲ್ಕು ಗಂಟೆಗೆ ಭಾರತೀಯ ವರ್ಣದ ಅಜ್ಞಾತ ಮತ್ತು ಸಂದಿಗ್ಧ ಯುವಕನನ್ನು ನಾನು ಬಿಲ್ಡಿಂಗ್ ಹೊರಗೆ ನಿಂತಿರುವುದನ್ನು ನೋಡಿದೆ' ಎನ್ನುತ್ತಿದ್ದಳು.

ಅಭಿಲಾಷ್ ಹೇಳಿದ, 'ಹೌದು, ಸಂಜೆ ಸುಮಾರು ನಾಲ್ಕು ಗಂಟೆಗೇ ಕಳ್ಳತನವಾಗಿದೆ. ಏಕೆಂದರೆ ಬಾಗಿಲಿಗೆ ಹಾಕಿದ ಥರ್ಮಾಮೀಟರ್, ಕಳ್ಳರು ಸಾಮಾನುಗಳನ್ನು ಹೊರಗೆ ತೆಗೆದುಕೊಂಡು ಹೋದಾಗ ಕೆಳಗೆ ಬಿದ್ದಿರಬಹುದು, ಅದಕ್ಕೇ ಸಮಯ ನಾಲ್ಕು ಗಂಟೆಗೇ ನಿಂತು ಹೋಗಿರುವುದು ಕಾಣಬರುತ್ತದೆ.'

ಮಾರ್ಕೋ ತಮಾಷೆ ಮಾಡುತ್ತಾ ಹೇಳಿದ, 'ಆ ಇಂಡಿಯನ್‌ಗೆ ಅಮೆರಿಕದಲ್ಲಿ ಕಳ್ಳತನ ಮಾಡಲು ಒಬ್ಬ ಇಂಡಿಯನ್ನಿನ ಮನೆಯೇ ಸಿಗಬೇಕಾ... ಕಳ್ಳ ಸ್ವಲ್ಪವಾದರೂ ರಾಷ್ಟ್ರೀಯ ಭಾವನೆಯನ್ನು ತೋರಬೇಕಿತ್ತು.'

ನನಗೆ ಅಭಿಲಾಷ್ ಮತ್ತು ಶೋಭನಾ ಬಗ್ಗೆ ತುಂಬಾ ಸಹಾನುಭೂತಿಯಿತ್ತು. ಅವರು ನಿರಾಸೆ ಮತ್ತು ಅಸಹಾಯಕತೆಯಿಂದ ಕೂತಿದ್ದರು. ಅವರು ಹೊಸದಾಗಿ ಗೃಹಸ್ಥ ಜೀವನಕ್ಕೆ ಕಾಲಿಟ್ಟಿದ್ದರು; ಆದರೆ ಸಾಕಷ್ಟನ್ನು ಕಳೆದುಕೊಂಡಿದ್ದರು. ಅವರ ಬಳಿ ಯಾವುದೇ ವಿಮೆ ಕವರೇಜ್ ಸಹ ಇರಲಿಲ್ಲ.

'ಕಳ್ಳರು ಕ್ರೂರಿಗಳಾಗಿರುತ್ತಾರೆ.'

ಪಾಲ್, ನೀವು ಹೇಳುತ್ತಿರುವುದು ನಿಜ. ಆದರೆ ಕೋಲೀನ್ ಪದೇ ಪದೇ ಕಳ್ಳ ಇಂಡಿಯನ್ ಆಗಿದ್ದ ಎಂದು ಹೇಳುವುದು ಮತ್ತು ಮಾರ್ಕೋನ ಇಂಥ ತಮಾಷೆಯನ್ನು ಕೇಳಿ ನನಗೆ ತೀವ್ರ ದುಃಖವಾಯಿತು.

'ಕಳ್ಳ ಇಂಡಿಯನ್ ಆಗಿದ್ದ ಎಂದು ನೀವು ಹೇಗೆ ಹೇಳ್ತೀರ? ಮೆಕ್ಸಿಕನ್ ಸಹ ಇಂಡಿಯನ್ ಹಾಗೆಯೇ ಕಾಣುತ್ತಾರೆ.' ನಾನು ಕೋಲೀನಳನ್ನು ತರ್ಕದ ರೂಪದಲ್ಲಿ ಪ್ರಶ್ನಿಸಿದೆ.

ಪೊಲೀಸರು ಹೇಳಿದರು, 'ಕಳ್ಳರು ಎಲ್ಲಿಯವರೇ ಆಗಿರಲಿ, ಆದರೆ ಅವರು ಏಷಿಯಾ, ವಿಶೇಷವಾಗಿ ಇಂಡಿಯನ್ ಮತ್ತು ಪಾಕಿಸ್ತಾನಿಯರ ಮನೆಗಳಿಗೇ ಕನ್ನ ಹಾಕುತ್ತಾರೆ. ಅವರಿಗೆ ಬಂಗಾರ–ಬೆಳ್ಳಿಯ ಒಡವೆಗಳು ಅವರ ಮನೆಯಲ್ಲಿಯೇ ಸಿಗುತ್ತವೆ ಎಂಬುದು ತಿಳಿದಿರುತ್ತದೆ.'

'ಇಲ್ಲಿ ನಿನಗೆ ಕಳ್ಳತನವಾಗಿರುವುದು ಹೇಗೆ ತಿಳಿಯಿತು?' ನಾನು ನನ್ನ ಮಗ ಜೋಶ್‌ನನ್ನು ಕೇಳಿದೆ.

ಜೋಶ್ ನನಗೆ ಕೋಲೀನಳೊಂದಿಗೆ ನಡೆದ ಮಾತುಕತೆಯನ್ನೆಲ್ಲಾ ಹೇಳಿದ.

(ಸಶೇಷ)